## ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.

## ಪ್ರಕರಣ ಸಂಖ್ಯೆ: 07/2026

**ದಿನಾಂಕ: 25.02.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| | | | |
|---|---|---|---|
| ಸಿಡಬ್ಲ್ಯೂ: | 5 | ಪಿಡಬ್ಲ್ಯೂ | 5 |
| ಹೆಸರು | ಗಿರಿಜಮ್ಮ | | |
| ತಂದೆ / ಗಂಡನ ಹೆಸರು | ರಂಗನಾಥಪ್ಪ | | |
| ವಯಸ್ಸು | 65 | | |
| ಉದ್ಯೋಗ | ವ್ಯವಸಾಯ | | |
| ವಾಸ | ರಂಗನಹಳ್ಳಿ | | |

### ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ:

ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಚಾಸಾ 1 ರಿಂದ 4 ಮತ್ತು 6 ರವರ ಒಂದೇ ಊರಿನವರಾಗಿರುವುದರಿಂದ ಪರಿಚಯ ಇರುತ್ತಾರೆ.

2. ದಿ:07.11.2015 ರಂದು ಸಂಜೆ 7.30 ರ ಸಮಯದಲ್ಲಿ ಮನೆಯಿಂದ ದೇವಸ್ಥಾನಕ್ಕೆ ಹೋಗುತ್ತಿರುವಾಗ ಎಲ್ಲರೂ ಗಲಾಟೆ ಮಾಡುತ್ತಿರುತ್ತಾರೆ. ಆದರೆ ಯಾರ್ಯಾರು ಗಲಾಟೆ ಮಾಡುತ್ತಿರುತ್ತಾರೆಂದು ನನಗೆ ಗೊತ್ತಿಲ್ಲ. ಹಾಲಿ ಗಲಾಟೆ ಬಗ್ಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

### ಪಾಟೀ ಸವಾಲು: ಎ ಪಿ ಪಿ ರವರಿಂದ:

ದಿ: 07.11.2015 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ 4 ರವರು ಮನೆಯ ಬಳಿ ಮಾತನಾಡುತ್ತಿರುವಾಗ ಗಲಾಟೆಯನ್ನು ಕೇಳಿಸಿಕೊಂಡು ಸ್ಥಳಕ್ಕೆ ಹೋದಾಗ ಆರೋಪಿಗಳು ದೇವಸ್ಥಾನದ ವಿಚಾರವಾಗಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ

ಬೈದು ಕಲ್ಲಿನಿಂದ ಹಲ್ಲೆ ಮಾಡಿರುವುದನ್ನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ. ಚಾಸಾ 3 ಮತ್ತು 5 ರವರು ಗಲಾಟೆ ಬಿಡಿಸಿ ಚಾಸಾ 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಗೊತ್ತಿಲ್ಲ. ಮು.ಮಾ.1 ರಿಂದ ಆರೋಪಿಗಳು ಚಾಸಾ 1 ರವರಿಗೆ ಹೊಡೆದಿರುತ್ತಾರೆಂದರೆ ಗೊತ್ತಿಲ್ಲ. ನಾನು ಮೇಲಿನಂದತೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ಹಲ್ಲೆಗೆಳೆದ ಕಾರಣ ಅದನ್ನು ಹೇಳಿಕೆ ಭಾಗ 3 ಎಂದು ಗುರುತಿಸಲಾಯಿತು. ನಾನು ಗಲಾಟೆಯನ್ನು ಕಣ್ಣಾರೆ ನೋಡಿದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪಾರ ಹಿ.ಸಿ.ಜೆ ಮತ್ತು ಜೆ.ಎಮ್.ಎಫ್.ಸಿ.
ಶಿರಾ.